**ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ- ಕರ್ನಾಟಕ**
ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಟ್ಟಡಗಳ
ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು -೫೬೦ ೦೦೧.

ಸಂಖ್ಯೆ : ಆರ್.ಎಂ.ಎಸ್.ಎ./ಆ.ವಿ.ಪ್ರ.ಪರೀಕ್ಷೆ/2018-19ರ-ದಾಖಲಾತಿ/2017-18 ದಿನಾಂಕ : 22/01/2018

## ಸುತ್ತೋಲೆ

**ವಿಷಯ** : 2018-19ನೇ ಸಾಲಿನ ಆದರ್ಶ ವಿದ್ಯಾಲಯಗಳಿಗೆ 6ನೇ ತರಗತಿಯ ದಾಖಲಾತಿಯ ಮಾರ್ಗಸೂಚಿ.

***********

2010-11ನೇ ಸಾಲಿನಿಂದ ಆದರ್ಶ ವಿದ್ಯಾಲಯಗಳು ಪ್ರಾರಂಭವಾಗಿದ್ದು, ಪ್ರತಿ ವರ್ಷದಂತೆ 2018-19ನೇ ಸಾಲಿನ ಆದರ್ಶ ವಿದ್ಯಾಲಯಗಳ 6ನೇ ತರಗತಿಗೆ 80 ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳಲು ಆಯ್ಕೆ ಪರೀಕ್ಷೆ ನಡೆಸಬೇಕಾಗಿರುತ್ತದೆ. ಈ ಪ್ರವೇಶ ಪರೀಕ್ಷೆಯ ಪ್ರಕ್ರಿಯೆಯನ್ನು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಹಾಗೂ ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತಿನ ವತಿಯಿಂದ ಜಂಟಿಯಾಗಿ ನಡೆಸಲು ತೀರ್ಮಾನಿಸಲಾಗಿದೆ. ಆಯ್ಕೆ ಪರೀಕ್ಷೆಯನ್ನು ನಡೆಸಲು ಜಿಲ್ಲಾ ಉಪನಿರ್ದೇಶಕರು(ಆಡಳಿತ), ಉಪನಿರ್ದೇಶಕರು(ಅಭಿವೃದ್ಧಿ), ಕ್ಷೇತ್ರ ಶಿಕ್ಷಣಾಧಿಕಾರಿಗಳು, ಆದರ್ಶ ವಿದ್ಯಾಲಯಗಳ ಮುಖ್ಯ ಶಿಕ್ಷಕರು ಮತ್ತು ಐದನೆಯ ತರಗತಿಗಳು ನಡೆಯುತ್ತಿರುವ ಎಲ್ಲಾ ಶಾಲೆಗಳ ಮುಖ್ಯೋಪಾಧ್ಯಾಯರು ಅಗತ್ಯ ಕ್ರಮ ವಹಿಸಬೇಕಾಗುತ್ತದೆ.

2017-18ನೇ ಸಾಲಿನಲ್ಲಿ ಕೆಲವು ಶಾಲೆಗಳಲ್ಲಿ ನಿಗದಿಪಡಿಸಿದ 80 ಮಕ್ಕಳ ದಾಖಲಾತಿಯಾಗದಿರುವುದನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದೆ. ಶಿಕ್ಷಣ ಇಲಾಖೆಯ ಅತ್ಯಂತ ಬೇಡಿಕೆಯಿರುವ ಶಾಲೆಗಳಲ್ಲಿ ಆದರ್ಶ ವಿದ್ಯಾಲಯವೂ ಸಹ ಒಂದಾಗಿದೆ. ಹೀಗಿದ್ದರೂ ಸಹ ಪೂರ್ಣ ಪ್ರಮಾಣದಲ್ಲಿ ದಾಖಲಾತಿಯಾಗದಿರುವುದಕ್ಕೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ನೇರ ಜವಾಬ್ದಾರರನ್ನಾಗಿ ಮಾಡಲಾಗುತ್ತದೆ.

ಪ್ರಸ್ತುತ ಸಾಲಿನ ಪರೀಕ್ಷಾ ಪ್ರಕ್ರಿಯೆಯನ್ನು ತಂತ್ರಜ್ಞಾನ ಬಳಸಿ online ಮೂಲಕ ನಡೆಸುತ್ತಿರುವುದರಿಂದ, ಎಲ್ಲಾ ಹಂತದ ಅಧಿಕಾರಿಗಳು ಮತ್ತು ಸಿಬ್ಬಂದಿ ಈ ಮಾರ್ಗಸೂಚಿಯನ್ನು ಅತ್ಯಂತ ಸೂಕ್ಷ್ಮವಾಗಿ ಅವಲೋಕಿಸಿ, ಸೂಚನೆಗಳನ್ನು ಅನುಸರಿಸಿ ಕಾರ್ಯ ನಿರ್ವಹಿಸುವುದರೊಂದಿಗೆ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಲು ತಿಳಿಸಿದೆ.

**ಅರ್ಜಿ ಸಲ್ಲಿಸಲು ಅರ್ಹತೆ :**

- 2017-18ನೇ ಸಾಲಿನಲ್ಲಿ ಆಯಾ ತಾಲ್ಲೂಕಿನ ನೋಂದಾಯಿತ ಶಾಲೆಯ ಐದನೆಯ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳು ಅದೇ ತಾಲ್ಲೂಕಿನಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.
- ಆಯಾ ತಾಲ್ಲೂಕಿನ ಮೂಲ ನಿವಾಸಿಗಳ ಮಕ್ಕಳು ಬೇರೆ ತಾಲ್ಲೂಕು/ಜಿಲ್ಲೆ/ರಾಜ್ಯಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರೂ ಸಹ 6ನೇ ತರಗತಿಯಿಂದ ಮೂಲ ತಾಲ್ಲೂಕಿನಲ್ಲಿ ವ್ಯಾಸಂಗ ಮಾಡಲು ಇಚ್ಛಿಸಿದಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

ಪರೀಕ್ಷೆಯ ವಿವರಗಳು:

- ಆಯ್ಕೆ ಪರೀಕ್ಷೆಗೆ 3 ರಿಂದ 5ನೇ ತರಗತಿ ಪಠ್ಯ ಪುಸ್ತಕ ಆಧರಿಸಿ ಕನ್ನಡ (16%), ಆಂಗ್ಲಭಾಷೆ (16%), ಗಣಿತ(16%) ವಿಜ್ಞಾನ(16%), ಸಮಾಜ ವಿಜ್ಞಾನ(16%), ಸಾಮಾನ್ಯ ಜ್ಞಾನ (ಜನರಲ್ ನಾಲೇಜ್)(10%) ಮತ್ತು ಸಾಮಾನ್ಯ ಬೌದ್ಧಿಕ ಸಾಮರ್ಥ್ಯ (10%) ಇವುಗಳನ್ನು ಪರಿಗಣಿಸಲಾಗುವುದು. ಪ್ರಶ್ನೆ ಪತ್ರಿಕೆಯು ವಸ್ತುನಿಷ್ಠ (objective type) ಪ್ರಶ್ನೆಗಳನ್ನು ಹೊಂದಿದ್ದು, ಆಂಗ್ಲ ಮತ್ತು ಕನ್ನಡ ಮಾಧ್ಯಮಗಳಲ್ಲಿರುತ್ತವೆ. ಪರೀಕ್ಷೆಗೆ ಒಂದೇ ಪ್ರಶ್ನೆ ಪತ್ರಿಕೆ ಇದ್ದು 100 ಪ್ರಶ್ನೆಗಳಿರುತ್ತವೆ.
- ಪರೀಕ್ಷಾ ದಿನಾಂಕ : 11, ಮಾರ್ಚ್ 2018 ರಂದು ಭಾನುವಾರ ಬೆಳಿಗ್ಗೆ 10.30 ರಿಂದ 1.00ರ ವರೆಗೆ.
- ಪರೀಕ್ಷೆಯ ಅವಧಿ 2 ಘಂಟೆ 30 ನಿಮಿಷ. ವಿದ್ಯಾರ್ಥಿಗಳು ಪರೀಕ್ಷೆ ಪ್ರಾರಂಭವಾಗುವ 15 ನಿಮಿಷಗಳು ಮುಂಚಿತವಾಗಿ ಪರೀಕ್ಷಾ ಕೇಂದ್ರದಲ್ಲಿ ಹಾಜರಿರಬೇಕು.

**ಅರ್ಜಿ ಸಲ್ಲಿಸಲು ವಿದ್ಯಾರ್ಥಿಗಳು/ಪೋಷಕರಿಗೆ ಸೂಚನೆಗಳು**

- ❖ ದಿನಾಂಕ 27/01/2018 ರಿಂದ 17/02/2018 ರವರೆಗೂ www.schooleducation.kar.nic.in ಅಥವಾ www.vidyavahini.karnataka.gov.in ವೆಬ್ ಪುಟಗಳ ಮೂಲಕ ಪೋಷಕರು online ಅರ್ಜಿ ಸಲ್ಲಿಸಬಹುದಾಗಿದೆ.
- ❖ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಹಂತದ ಕಛೇರಿಗಳು, ಆದರ್ಶ ವಿದ್ಯಾಲಯಗಳು, ಪ್ರತಿ ಕ್ಲಸ್ಟರ್ ಹಂತದಲ್ಲಿನ ಒಂದು ಪ್ರೌಢ ಶಾಲೆ ಹಾಗೂ ಒಂದು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಸಹಾಯ ಕೇಂದ್ರಗಳನ್ನು ತೆರೆಯಲಾಗಿದ್ದು, ಪೋಷಕರು ಈ ಸೇವಾ ಕೇಂದ್ರಗಳಲ್ಲಿನ ಸೌಲಭ್ಯವನ್ನು ಬಳಸಿಕೊಂಡು ಉಚಿತವಾಗಿ ಅರ್ಜಿಗಳನ್ನು ಸಲ್ಲಿಸಬಹುದು.
- ❖ ಆಯಾ ತಾಲ್ಲೂಕಿನ ಮೂಲ ನಿವಾಸಿಗಳ ಮಕ್ಕಳು ಹೊರರಾಜ್ಯಗಳಲ್ಲಿ ವ್ಯಾಸಂಗ ಮಾಡುತ್ತಿದ್ದಲ್ಲಿ, ವ್ಯಾಸಂಗ ಪ್ರಮಾಣಪತ್ರವನ್ನು ಪಡೆದು online ಮೂಲಕ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅಳವಡಿಸುವುದನ್ನು (upload) ಕಡ್ಡಾಯಗೊಳಿಸಲಾಗಿದೆ. ಇದಕ್ಕೆ ಪೂರಕವಾಗಿ ವಿದ್ಯಾರ್ಥಿಯು ಪ್ರವೇಶ ಪರೀಕ್ಷೆಯಲ್ಲಿ ಅರ್ಹತೆಯನ್ನು ಪಡೆದು ಶಾಲೆಗೆ ದಾಖಲಾಗುವ ಸಂದರ್ಭದಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ವಾಸಸ್ಥಳ ದೃಢೀಕರಣ ಪ್ರಮಾಣಪತ್ರವನ್ನು ಸಲ್ಲಿಸಬೇಕು.
- ❖ ಮೀಸಲಾತಿಯನ್ನು ಪಡೆಯುವ ಮಕ್ಕಳು ಜಾತಿ ಪ್ರಮಾಣಪತ್ರದ ಸಂಖ್ಯೆಯನ್ನು ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ನಮೂದಿಸಬೇಕು. ಇದಕ್ಕೆ ಪೂರಕವಾಗಿ ವಿದ್ಯಾರ್ಥಿಯು ಪ್ರವೇಶ ಪರೀಕ್ಷೆಯಲ್ಲಿ ಅರ್ಹತೆಯನ್ನು ಪಡೆದು ಶಾಲೆಗೆ ದಾಖಲಾಗುವ ಸಂದರ್ಭದಲ್ಲಿ ಪ್ರಮಾಣಪತ್ರದ ಮೂಲ ಪ್ರತಿಯನ್ನು ಸಲ್ಲಿಸಬೇಕು.

❖ ವಿಶೇಷ ಚೇತನ ಮಕ್ಕಳು ಮೀಸಲಾತಿಯನ್ನು ಪಡೆಯಲು ಸಕ್ಷಮ ಪ್ರಾಧಿಕಾರಗಳಿಂದ ಪಡೆದಿರುವ ಪ್ರಮಾಣಪತ್ರವನ್ನು online ಮೂಲಕ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಅಳವಡಿಸುವುದನ್ನು (upload) ಕಡ್ಡಾಯಗೊಳಿಸಲಾಗಿದೆ. ಇದಕ್ಕೆ ಪೂರಕವಾಗಿ ವಿದ್ಯಾರ್ಥಿಯು ಪ್ರವೇಶ ಪರೀಕ್ಷೆಯಲ್ಲಿ ಅರ್ಹತೆಯನ್ನು ಪಡೆದು ಶಾಲೆಗೆ ದಾಖಲಾಗುವ ಸಂದರ್ಭದಲ್ಲಿ ಪ್ರಮಾಣಪತ್ರದ ಮೂಲ ಪ್ರತಿಯನ್ನು ಸಲ್ಲಿಸಬೇಕು.

❖ ತಾಂತ್ರಿಕವಾಗಿ ಅರ್ಜಿಯನ್ನು ಸಲ್ಲಿಸಲು ಅಗತ್ಯವಾದ ಸೂಚನೆಗಳನ್ನು www.vidyavahini.karnataka.gov.in ರಲ್ಲಿ ನೀಡಲಾಗಿದೆ.

**ಅಧಿಕಾರಿಗಳಿಗೆ ವಿಶೇಷ ಸೂಚನೆ**

➢ ಜಿಲ್ಲಾ ಹಂತದಲ್ಲಿ ಉಪನಿರ್ದೇಶಕರು (ಅಭಿವೃದ್ಧಿ) ರವರ ನೇತೃತ್ವದಲ್ಲಿ ಈ ಆಯ್ಕೆ ಪರೀಕ್ಷೆಯನ್ನು ನಡೆಸಲಾಗುತ್ತಿದ್ದು, ಅವರಿಗೆ ಬೇಕಾಗುವ ಎಲ್ಲಾ ಆಡಳಿತಾತ್ಮಕ ಸಹಕಾರವನ್ನು ಜಿಲ್ಲೆಯ ಎಲ್ಲಾ ಸ್ಥರದ ಅಧಿಕಾರಿಗಳು ಪ್ರಥಮ ಆದ್ಯತೆಯಾಗಿ ನೀಡುವುದು.

➢ ಪ್ರಶ್ನೆ ಪತ್ರಿಕೆ ಹಾಗೂ **OMR** ತಯಾರಿಕೆ, ಮುದ್ರಣ, ವಿತರಣೆ, ಅಂಕಪಟ್ಟಿ ಸಿದ್ಧಪಡಿಸುವುದು ಮುಂತಾದ ಕಾರ್ಯಗಳನ್ನು ಬೆಂಗಳೂರಿನ ಕೆ.ಎಸ್.ಕ್ಯೂ.ಎ.ಎ.ಸಿಗೆ ವಹಿಸಲಾಗಿದ್ದು ಅವರು ನೀಡುವ ಸೂಚನೆಗಳನ್ವಯ ಕಾರ್ಯ ನಿರ್ವಹಿಸುವುದು.

➢ ಪರೀಕ್ಷೆಯನ್ನು ಯಾವುದೇ ಗೊಂದಲಗಳಿಗೆ ಅವಕಾಶವಿಲ್ಲದಂತೆ ಪರಿಣಾಮಕಾರಿಯಾಗಿ ನಡೆಸಲು ಸಭೆಗಳನ್ನು ನಡೆಸಿ ಸೂಚನೆಗಳನ್ನು ನೀಡುವುದು.

➢ ಪರೀಕ್ಷಾ ಗೌಪ್ಯತೆಯನ್ನು ಕಾಪಾಡುವಲ್ಲಿ ಅವಶ್ಯಕವಾದ ಎಲ್ಲಾ ಕ್ರಮ ಕೈಗೊಳ್ಳುವುದು.

➢ ಪ್ರಶ್ನೆ ಪತ್ರಿಕೆಗಳನ್ನು ಜಿಲ್ಲಾ ಕೇಂದ್ರದಿಂದ ಖಜಾನೆಗೆ ಹಾಗೂ ಖಜಾನೆಯಿಂದ ಪರೀಕ್ಷಾ ಕೇಂದ್ರಗಳಿಗೆ, ಖುದ್ದಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳೇ ತಮ್ಮ ಅಧಿಕೃತ ವಾಹನಗಳಲ್ಲಿಯೇ ರವಾನಿಸುವುದು. ಇದೇ ರೀತಿ ಉತ್ತರ ಪತ್ರಿಕೆಗಳನ್ನು ಸಹ ಜಿಲ್ಲಾ ಹಂತಕ್ಕೆ ಖುದ್ದಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳೇ ತಮ್ಮ ಅಧಿಕೃತ ವಾಹನಗಳಲ್ಲಿಯೇ ರವಾನಿಸುವುದು.

| ಪರೀಕ್ಷಾ ಪೂರ್ವ ಸಿದ್ಧತೆಗಳು | | | | |
|---|---|---|---|---|
| ಕ್ರಮ ಸಂಖ್ಯೆ | ನಿರ್ವಹಿಸಬೇಕಾದ ಕಾರ್ಯ | ಸೂಚನೆಗಳು | ಕಾಲಮಿತಿ | ಜವಾಬ್ದಾರಿ |
| 1 | 2018–19ನೇ ಸಾಲಿಗೆ ಶಾಲೆಗಳ ಸಿದ್ಧತೆ | ಹೊಸ ಕಟ್ಟಡಗಳಿಗೆ ಅಗತ್ಯ ಭೌತಿಕ ಸೌಲಭ್ಯಗಳನ್ನು ಸಕಾಲದಲ್ಲಿ ಒದಗಿಸಿ 6 ರಿಂದ 10ನೇ ತರಗತಿಯವರೆಗೆ ಮಕ್ಕಳ ಬೋಧನಾ-ಕಲಿಕಾ ಪ್ರಕ್ರಿಯೆಗೆ ಪೂರಕವಾಗುವ ರೀತಿಯಲ್ಲಿ ಶಾಲೆಯನ್ನು ಸುಸಜ್ಜಿತಗೊಳಿಸುವುದು. | 27/01/2018 ರಿಂದ 20/05/2018 | ಉಪನಿರ್ದೇಶಕರು(ಆಡಳಿತ) ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು |
| 2 | ಶಾಲೆಗಳ ಕಟ್ಟಡದ ಮಾಹಿತಿ | ರಾಜ್ಯದ 74 ಆದರ್ಶ ವಿದ್ಯಾಲಯಗಳಲ್ಲಿ ಈಗಾಗಲೇ 68 ಆದರ್ಶ ವಿದ್ಯಾಲಯಗಳ ಕಟ್ಟಡ ನಿರ್ಮಾಣ ಕಾರ್ಯ ಪೂರ್ಣಗೊಂಡು ನೂತನ ಕಟ್ಟಡಗಳಲ್ಲಿ ಶಾಲೆಯನ್ನು ಮುಂದುವರೆಸಲಾಗಿದೆ. ನಿರ್ಮಾಣ ಹಂತದಲ್ಲಿರುವ 06 ಕಟ್ಟಡಗಳು 2017–18ರ ಶೈಕ್ಷಣಿಕ ಸಾಲಿನ ಅಂತ್ಯದೊಳಗೆ ಪೂರ್ಣಗೊಳ್ಳಲಿದ್ದು, 2018–19ನೇ ಸಾಲಿನಿಂದ ನೂತನ ಕಟ್ಟಡಗಳಲ್ಲಿ ಶಾಲೆಯನ್ನು ಮುಂದುವರೆಸಲಾಗುವುದು. | 27/01/2018 ರಿಂದ 20/05/2018 | DDPI(Admin), DDPI(Academic), DyPC(SSA), DyPC(RMSA), BEO, BRCO, BRP, ECO, CRP, ಆದರ್ಶ ವಿದ್ಯಾಲಯಗಳ ಮುಖ್ಯೋಪಾಧ್ಯಾಯರು, ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು ಮತ್ತು ಹಿರಿಯ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು |
| 3 | ಪ್ರಕಟಣೆ ಮತ್ತು ವ್ಯಾಪಕ ಪ್ರಚಾರ | ➢ ಪರೀಕ್ಷೆಗೆ ಅರ್ಜಿ ಸಲ್ಲಿಸಲು ದಿನಪತ್ರಿಕೆ, ಸ್ಥಳೀಯವಾಗಿ ಲಭ್ಯವಿರುವ ದೃಶ್ಯ ಮಾಧ್ಯಮ, ಸಾರ್ವಜನಿಕ ಪ್ರಕಟಣಾ ಸ್ಥಳ ಹಾಗೂ ಇನ್ನಿತರ ವಿಧಾನಗಳ ಮೂಲಕ ಪ್ರಕಟಣೆಯನ್ನು ನೀಡುವ ಸಂದರ್ಭದಲ್ಲಿ 2018–19ನೇ ಸಾಲಿನಲ್ಲಿ online ಮೂಲಕ ಅರ್ಜಿ ಸಲ್ಲಿಸುವುದು ಸೇರಿದಂತೆ ಶಾಲೆಯು ಮುಂದುವರೆಯುವ ನೂತನ ಕಟ್ಟಡದ ಸ್ಥಳ, ವಿಳಾಸ, ದೂರಗಳ ಬಗ್ಗೆ ಮಾಹಿತಿಯನ್ನು ಸಾರ್ವಜನಿಕರಿಗೆ ಮತ್ತು ಪೋಷಕರಿಗೆ ಸ್ಪಷ್ಟವಾಗಿ ತಿಳಿಯುವ ರೀತಿಯಲ್ಲಿ ವ್ಯಾಪಕ ಪ್ರಚಾರ ನೀಡುವುದು.<br>➢ ಪರೀಕ್ಷೆ ಬಗ್ಗೆ ಮಾಹಿತಿಯನ್ನು ತಾಲ್ಲೂಕಿನ ಎಲ್ಲಾ ಶಾಲೆಗಳಲ್ಲಿ ಲಭ್ಯವಾಗುವಂತೆ ಮಾಡುವುದು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಪರೀಕ್ಷೆಯನ್ನು ತೆಗೆದುಕೊಳ್ಳುವಂತೆ ಪ್ರೇರೇಪಿಸುವುದು. ತಾಲ್ಲೂಕಿನ ಎಲ್ಲಾ ಶಾಲೆಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ಇತರೆ ಇಲಾಖೆಗಳ ಕಛೇರಿಗಳಲ್ಲಿ ವ್ಯಾಪಕ ಪ್ರಚಾರವನ್ನು ಉಚಿತವಾಗಿ ಮಾಡಲು ಕ್ರಮ ವಹಿಸುವುದು.<br>➢ ದಿನಪತ್ರಿಕೆಗಳಲ್ಲಿ ದಿನಾಂಕ 27/01/2018 ರಿಂದ 17/02/2018ರವರೆಗೆ ನಿರಂತರವಾಗಿ ಪ್ರಕಟಣೆ ನೀಡುವಂತೆ ಅಗತ್ಯ ಕ್ರಮ ವಹಿಸುವುದು.<br>➢ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಹಾಗೂ ಎಲ್ಲಾ ಇಲಾಖೆಯ ಕಛೇರಿಗಳ ಪ್ರಕಟಣಾಫಲಕ (notice board)ಗಳಲ್ಲಿ ಪ್ರಕಟಣೆಯನ್ನು | 27/01/2018 ರಿಂದ 17/02/2018 | ವಿಭಾಗೀಯ ಆಯುಕ್ತಾಲಯದ ಅಧಿಕಾರಿಗಳು, DDPI(Admin), DDPI(Academic), DyPC(SSA), DyPC(RMSA), BEO, BRCO, BRP, ECO, CRP, ಆದರ್ಶ ವಿದ್ಯಾಲಯಗಳ ಮುಖ್ಯೋಪಾಧ್ಯಾಯರು, ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು ಮತ್ತು ಹಿರಿಯ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು |

| | | | | |
|---|---|---|---|---|
| | | ದಿನಾಂಕ 27/01/2018 ರಂದು ನೀಡುವುದು.<br>➢ ದಿನಾಂಕ 27/01/2018 ರಿಂದ 17/02/2018 ರಂದು ಸಂಜೆ 5.30 ರವರೆಗೆ ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿದ್ದು, ತದನಂತರ ಅರ್ಜಿಗಳನ್ನು ಸಲ್ಲಿಸಲು ಸಾಧ್ಯವಾಗುವುದಿಲ್ಲ ಎಂಬ ಅಂಶ ಮತ್ತು ಪ್ರವೇಶ ಪರೀಕ್ಷೆಯ ವೇಳಾಪಟ್ಟಿಯು ಇಲಾಖಾ ವೆಬ್ ಸೈಟ್ www.ssakarnataka.gov.inನಲ್ಲಿ ಲಭ್ಯವಿರುತ್ತದೆ ಎಂಬ ಮಾಹಿತಿಯನ್ನು ಸಾರ್ವಜನಿಕರಿಗೆ ತಿಳಿಯುವಂತೆ ಮಾಡುವುದು.<br>➢ 2017–18ನೇ ಸಾಲಿನಲ್ಲಿ 5ನೇ ತರಗತಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಈ ಆಯ್ಕೆ ಪರೀಕ್ಷೆ ಬಗ್ಗೆ ಎಲ್ಲಾ ಶಾಲೆಗಳಲ್ಲಿ ಮತ್ತು ಸಾರ್ವಜನಿಕರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮಾಹಿತಿ ನೀಡಿ ಪರೀಕ್ಷೆ ತೆಗೆದುಕೊಳ್ಳಲು ಪ್ರೇರೇಪಿಸುವುದು. ಈ ಕಾರ್ಯವನ್ನು ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮನ್ವಯಾಧಿಕಾರಿಗಳು, ಶಿಕ್ಷಣ ಸಂಯೋಜಕರು, ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು ಹಾಗೂ ಸಮೂಹ ಸಂಪನ್ಮೂಲ ವ್ಯಕ್ತಿಗಳು ವ್ಯಾಪಕವಾಗಿ ಪ್ರಚಾರ ನೀಡುವುದರ ಮೂಲಕ ಮಾಡುವುದು.<br>➢ ಜಿಲ್ಲಾಧಿಕಾರಿಗಳಿಗೆ ಹಾಗೂ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಈ ಪ್ರವೇಶ ಪರೀಕ್ಷೆಯ ಬಗ್ಗೆ ಮಾಹಿತಿ ನೀಡುವುದು. | | |
| 4 | ಅಂತರ್ಜಾಲದ ವ್ಯವಸ್ಥೆಯನ್ನು ಕಲ್ಪಿಸಿಕೊಳ್ಳುವುದು | ವಿಭಾಗ, ಜಿಲ್ಲೆ, ತಾಲ್ಲೂಕು, ಕ್ಲಸ್ಟರ್ ಹಂತದ ಎಲ್ಲಾ ಕಛೇರಿಗಳಲ್ಲಿ ಮತ್ತು ಆದರ್ಶ ವಿದ್ಯಾಲಯಗಳಲ್ಲಿ internet ವ್ಯವಸ್ಥೆಯನ್ನು ಮಾಡಿಕೊಳ್ಳುವುದು. ಇದರ ಜೊತೆಗೆ ಕ್ಲಸ್ಟರ್ ಹಂತದಲ್ಲಿ ಗಣಕಯಂತ್ರ ಮತ್ತು ಪ್ರಿಂಟರ್‌ಗಳು ಇರುವ ಒಂದು ಪ್ರೌಢ ಶಾಲೆ ಹಾಗೂ ಒಂದು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ internet ವ್ಯವಸ್ಥೆಯನ್ನು ಕಲ್ಪಿಸಿಕೊಳ್ಳುವುದು. ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಅನುಮೋದನೆ ಪಡೆದು ಶಾಲೆಯಲ್ಲಿ ಲಭ್ಯವಿರುವ ಚಾಲ್ತಿ ಅಥವಾ ಸಂಚಿತ ನಿಧಿಯಿಂದ ಅಗತ್ಯ ಅನುದಾನವನ್ನು ನಿಯಮಾನುಸಾರ ವೆಚ್ಚ ಮಾಡಿ ಸೌಕರ್ಯ ಕಲ್ಪಿಸಿಕೊಳ್ಳುವುದು.<br>(ಗಣಕಯಂತ್ರ ಮತ್ತು ಪ್ರಿಂಟರ್ ಲಭ್ಯವಿರುವ ಶಾಲೆಗಳಿಗೆ ಸೂಚನೆ : Dongle ಮತ್ತು sim ಶಾಲೆಯಲ್ಲಿ ಲಭ್ಯವಿದ್ದರೆ, data pack ಅಳವಡಿಸಲು ರೂ.500/– ವೆಚ್ಚ ಮಾಡುವುದು. Dongle ಮತ್ತು sim ಶಾಲೆಯಲ್ಲಿ ಲಭ್ಯವಿಲ್ಲದಿದ್ದರೆ, ರೂ.2,000/–ರವರೆಗೆ ವೆಚ್ಚ ಭರಿಸುವುದು. ಇದರ ಜೊತೆಗೆ ರೂ.1000/– ವರೆಗೆ ಪ್ರಿಂಟರ್‌ಗೆ ಅವಶ್ಯಕವಿರುವ refill/ink ಖರೀದಿಗಾಗಿ ಬಳಸಿಕೊಳ್ಳಬಹುದು) | 25/01/2018 ರಿಂದ 26/01/2018 ರೊಳಗಾಗಿ ಕಲ್ಪಿಸಿಕೊಂಡು ಸಹಕಾರ ಕೇಂದ್ರಗಳನ್ನು ಸ್ಥಾಪಿಸುವುದು | DDPI(Admin), DDPI(Academic), DyPC(SSA), DyPC(RMSA), BEO, BRCO, BRP, ECO, CRP, ಆದರ್ಶ ವಿದ್ಯಾಲಯಗಳ ಮುಖ್ಯೋಪಾಧ್ಯಾಯರು, ಗಣಕಯಂತ್ರ ಸೌಲಭ್ಯವಿರುವ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು, ಹಿರಿಯ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು ಮತ್ತು ಪ್ರೌಢ ಶಾಲಾ ಮುಖ್ಯೋಪಾಧ್ಯಾಯರು. |

| ಅರ್ಜಿ ಸಲ್ಲಿಕೆ | | | | |
|---|---|---|---|---|
| ಕ್ರಮ ಸಂಖ್ಯೆ | ನಿರ್ವಹಿಸಬೇಕಾದ ಕಾರ್ಯ | ಸೂಚನೆಗಳು | ಕಾಲಮಿತಿ | ಜವಾಬ್ದಾರಿ |
| 5 | ಅರ್ಜಿ ಸಲ್ಲಿಸಲು ಸಹಾಯ ಕೇಂದ್ರಗಳ ಸ್ಥಾಪನೆ ಮತ್ತು ಚಾಲನೆ | ಅಂತರ್ಜಾಲದ ವ್ಯವಸ್ಥೆಯನ್ನು ಕಲ್ಪಿಸಿಕೊಳ್ಳುವ ಎಲ್ಲಾ ಶಾಲೆಗಳು, ವಿಭಾಗ ಮಟ್ಟದ ಕಛೇರಿಯಿಂದ ಕ್ಲಸ್ಟರ್ ಹಂತದವರೆಗಿನ ಎಲ್ಲಾ ಕಛೇರಿಗಳಲ್ಲಿಯೂ ಅರ್ಜಿ ಸಲ್ಲಿಸುವ ಸಹಾಯ ಕೇಂದ್ರಗಳನ್ನು ತೆರೆದಿರುವ ಬಗ್ಗೆ ಪ್ರಕಟಣೆಯಲ್ಲಿ ತಿಳಿಸುವುದು ಮತ್ತು ಇದರ ಬಗ್ಗೆ ಫಲಕವನ್ನು ಪ್ರದರ್ಶಿಸುವುದು | 26/01/2018 ರಿಂದ 17/02/2018 ರಂದು ಸಂಜೆ 5.30 ರವರೆಗೆ | ವಿಭಾಗೀಯ ಆಯುಕ್ತಾಲಯದ ಅಧಿಕಾರಿಗಳು, DDPI(Admin), DDPI(Academic), DyPC(SSA), DyPC(RMSA), BEO, BRCO, BRP, ECO, CRP, ಆದರ್ಶ ವಿದ್ಯಾಲಯಗಳ ಮುಖ್ಯೋಪಾಧ್ಯಾಯರು, ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು, ಹಿರಿಯ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು ಮತ್ತು ಪ್ರೌಢ ಶಾಲಾ ಮುಖ್ಯೋಪಾಧ್ಯಾಯರು. |
| 6 | ಅರ್ಜಿ ಸಲ್ಲಿಕೆ | ➢ www.schooleducation.kar.nic.in ವೆಬ್ ವಿಳಾಸದ ಮೂಲಕ ವಿದ್ಯಾವಾಹಿನಿ ತಂತ್ರಾಂಶದಲ್ಲಿ ನೂತನವಾಗಿ ಕಾರ್ಯರೂಪಕ್ಕೆ ತರಲಾಗಿರುವ ಆದರ್ಶ ವಿದ್ಯಾಲಯ ಕಾರ್ಯಕ್ರಮದ ಮುಖಪುಟ ತಂತ್ರಾಂಶವನ್ನು ತೆರೆದು online ಮೂಲಕ ಅರ್ಜಿ ಸಲ್ಲಿಸುವ ಮುಖಪುಟವನ್ನು ತೆರೆದು ಸೂಚನೆಗಳನ್ನು ಓದಿ ಅರ್ಥೈಸಿಕೊಂಡು ಪೋಷಕರು ಅರ್ಜಿ ಸಲ್ಲಿಸುವುದು.<br>➢ ಶಿಕ್ಷಣ ಇಲಾಖೆಯ ಕಛೇರಿಗಳಲ್ಲಿ ಹಾಗೂ ಶಾಲೆಗಳಲ್ಲಿ ತೆರೆದಿರುವ ಸೇವಾ ಕೇಂದ್ರಗಳಲ್ಲಿ ಸೌಲಭ್ಯವನ್ನು ಬಳಸಿಕೊಂಡು ಉಚಿತವಾಗಿ ಅರ್ಜಿಗಳನ್ನು ಸಲ್ಲಿಸಬಹುದು.<br>➢ 2017–18ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳು SATS ಸಂಖ್ಯೆಯನ್ನು ನಮೂದಿಸಿ ಅರ್ಜಿಗಳನ್ನು ಸಲ್ಲಿಸುವ ಮಕ್ಕಳು ವಿದ್ಯಾವಾಹಿನಿಯಲ್ಲಿ ಮೂಡುವ ತಮ್ಮ ವಿವರಗಳನ್ನು ಪರಿಶೀಲಿಸಿಕೊಳ್ಳುವುದು ಇದರಲ್ಲಿ ವ್ಯತ್ಯಾಸವಿದ್ದಲ್ಲಿ ದಿನಾಂಕ 17/02/2018 ರೊಳಗಾಗಿ ವ್ಯಾಸಂಗ ಮಾಡುತ್ತಿರುವ ಶಾಲಾ ಮುಖ್ಯೋಪಾಧ್ಯಾಯರ ಗಮನಕ್ಕೆ ತಂದು ಸರಿಪಡಿಸಿಕೊಳ್ಳುವುದು. | ದಿನಾಂಕ 27/01/2018 ರಿಂದ 17/02/2018 ರಂದು ಸಂಜೆ 5.30ರವರೆಗೆ | ವಿದ್ಯಾರ್ಥಿಗಳ ಪೋಷಕರು – ಸಾರ್ವಜನಿಕ ಶಿಕ್ಷಣ ಇಲಾಖೆಯ ವಿಭಾಗ ಮಟ್ಟದ ಕಛೇರಿಯಿಂದ ಕ್ಲಸ್ಟರ್ ಹಂತದ ಎಲ್ಲಾ ಕಛೇರಿಗಳ ಅಧಿಕಾರಿಗಳು ಹಾಗೂ ಗಣಕಯಂತ್ರವಿರುವ ಎಲ್ಲಾ ಶಾಲೆಗಳ ಮುಖ್ಯೋಪಾಧ್ಯಾಯರು. |

| | | | | |
|---|---|---|---|---|
| 7 | ಅರ್ಜಿ ಸಲ್ಲಿಕೆಯ ಸ್ವೀಕೃತಿ ಪಡೆಯುವುದು | ಸರಿಯಾದ ಕ್ರಮದಲ್ಲಿ ಅರ್ಜಿಗಳನ್ನು ಸಲ್ಲಿಸಿದ ನಂತರ ಪೋಷಕರು ನಮೂದಿಸಿರುವ ದೂರವಾಣಿ ಸಂಖ್ಯೆಗೆ ಸಂದೇಶವು ರವಾನೆಯಾಗುತ್ತದೆ. ಇದರ ಜೊತೆ ಕೂಡಲೇ ಸ್ವೀಕೃತಿಯನ್ನು ಪಡೆಯಬಹುದು. ಈ ಸ್ವೀಕೃತಿಯಲ್ಲಿ ಅರ್ಜಿಯ ಕ್ರಮ ಸಂಖ್ಯೆ ಮತ್ತು ಪ್ರವೇಶ ಪತ್ರವನ್ನು ಪಡೆಯುವ ದಿನಾಂಕವು ಸಹ ಮುದ್ರಣವಾಗುತ್ತದೆ. | ದಿನಾಂಕ 27/01/2018 ರಿಂದ 17/02/2018 ರಂದು ಸಂಜೆ 5.30ರವರೆಗೆ | ವಿಭಾಗೀಯ ಆಯುಕ್ತಾಲಯದ ಅಧಿಕಾರಿಗಳು, DDPI(Admin), DDPI(Academic), DyPC(SSA), DyPC(RMSA), BEO, BRCO, BRP, ECO, CRP, ಆದರ್ಶ ವಿದ್ಯಾಲಯಗಳ ಮುಖ್ಯೋಪಾಧ್ಯಾಯರು, ಇತರೆ ಪ್ರೌಢ ಶಾಲೆಗಳ ಮುಖ್ಯೋಪಾಧ್ಯಾಯರು, ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು ಮತ್ತು ಹಿರಿಯ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು |

| ಅರ್ಜಿಗಳ ಪರಿಶೀಲನೆ | | | | |
|---|---|---|---|---|
| ಕ್ರಮ ಸಂಖ್ಯೆ | ನಿರ್ವಹಿಸಬೇಕಾದ ಕಾರ್ಯ | ಸೂಚನೆಗಳು | ಕಾಲಮಿತಿ | ಜವಾಬ್ದಾರಿ |
| 8 | ಅರ್ಜಿಗಳ ಪರಿಶೀಲನೆ | ➢ ವಿದ್ಯಾರ್ಥಿಗಳ ಅರ್ಜಿಗಳು, ಪ್ರಮಾಣಪತ್ರಗಳು, ಮೀಸಲಾತಿ ಸಂಖ್ಯೆ ಮುಂತಾದ ಮಾಹಿತಿಯನ್ನು ಒಳಗೊಂಡಿರುತ್ತದೆ. ಆಯಾ ತಾಲ್ಲೂಕಿನ ಆದರ್ಶ ವಿದ್ಯಾಲಯಗಳ ಮುಖ್ಯೋಪಾಧ್ಯಾಯರು ವಿದ್ಯಾವಾಹಿನಿಯ ಮೂಲಕವೇ ಇವುಗಳನ್ನು ಪರಿಶೀಲಿಸಿ ಸರಿಯಾಗಿದ್ದಲ್ಲಿ YES ಎನ್ನುವುದನ್ನು ಕ್ಲಿಕ್ಕಿಸಿದಾಗ ಮಾತ್ರ ಅರ್ಜಿಗಳಲ್ಲಿ ಕೋರಲಾಗಿರುವ ಮೀಸಲಾತಿಯು ಸಿಂಧುವಾಗುತ್ತದೆ.<br>➢ ಅರ್ಜಿಗಳನ್ನು ಆಯಾ ತಾಲ್ಲೂಕಿನ ಆದರ್ಶ ವಿದ್ಯಾಲಯಗಳ ಮುಖ್ಯೋಪಾಧ್ಯಾಯರು ಪ್ರತಿನಿತ್ಯ ಪರಿಶೀಲಿಸಬೇಕು. ಪರಿಶೀಲನೆಯ ನಂತರ ಮುಖ್ಯೋಪಾಧ್ಯಾಯರು online ನಲ್ಲಿ ದೃಢೀಕರಣವನ್ನು ಮಾಡಿದಾಗ ಮಾತ್ರ ರಾಜ್ಯ ಕಛೇರಿಗೆ ವಿವಿಧ ರೀತಿಯ ಸಾಂಖ್ಯಿಕ ಮಾಹಿತಿಗಳು ಲಭ್ಯವಾಗುವುದಲ್ಲದೆ, ಅದನ್ನು ಪಡೆಯಲು ಸಾಧ್ಯವಾಗುತ್ತದೆ.<br>➢ ಈ ಸಾಂಖ್ಯಿಕ ಮಾಹಿತಿಯಿಂದ ಯಾವುದಾದರೂ ಅರ್ಜಿಗಳು ಸಲ್ಲಿಕೆಯಾಗುವ ಸಂದರ್ಭದಲ್ಲಿ ತಾಂತ್ರಿಕ ತೊಂದರೆಯಾಗಿದ್ದಲ್ಲಿ ಪರಿಶೀಲಿಸಿ ಸರಿಪಡಿಸಬಹುದಾಗಿದೆ. | ದಿನಾಂಕ 27/01/2018 ರಿಂದ 17/02/2018 | ಆದರ್ಶ ವಿದ್ಯಾಲಯಗಳ ಮುಖ್ಯೋಪಾಧ್ಯಾಯರು ಮತ್ತು ಆರ್.ಎಮ್.ಎಸ್.ಎ ರಾಜ್ಯ ಕಛೇರಿಯ ತಾಂತ್ರಿಕ ಪ್ರೋಗ್ರಾಮರ್. |

| ನೋಡೆಲ್ ಅಧಿಕಾರಿಗಳ ನೇಮಕ | | | | |
|---|---|---|---|---|
| ಕ್ರಮ ಸಂಖ್ಯೆ | ನಿರ್ವಹಿಸಬೇಕಾದ ಕಾರ್ಯ | ಸೂಚನೆಗಳು | ಕಾಲಮಿತಿ | ಜವಾಬ್ದಾರಿ |
| 9 | ಜಿಲ್ಲಾ ಹಾಗೂ ತಾಲ್ಲೂಕು ಹಂತದ ನೋಡೆಲ್ ಅಧಿಕಾರಿಯ ನೇಮಕ | ➢ ಗಣಕಯಂತ್ರ ಬಳಕೆಯಲ್ಲಿ ಪ್ರಾವಿಣ್ಯತೆ ಇರುವ ನೋಡೆಲ್ ಅಧಿಕಾರಿಗಳನ್ನು ಕೆಳಕಂಡಂತೆ ನೇಮಿಸುವುದು.<br>➢ ಜಿಲ್ಲಾ ಹಂತದಲ್ಲಿ ಪರೀಕ್ಷೆಯನ್ನು ಉಪನಿರ್ದೇಶಕರು(ಅಭಿವೃದ್ಧಿ) ರವರ ನೇತೃತ್ವದಲ್ಲಿ ನಡೆಸಲಾಗುವುದರಿಂದ ಡಯಟ್‌ನ ಹಿರಿಯ ಉಪನ್ಯಾಸಕರನ್ನು ಪರೀಕ್ಷಾ ಕಾರ್ಯದ ನೋಡೆಲ್ ಅಧಿಕಾರಿಯನ್ನಾಗಿ ಉಪನಿರ್ದೇಶಕರು(ಅಭಿವೃದ್ಧಿ) ರವರೇ ನೇಮಿಸುವುದು.<br>➢ ಪರೀಕ್ಷೆಯು ಎಲ್ಲಾ ತಾಲ್ಲೂಕುಗಳಲ್ಲಿ ನಡೆಯುವುದರಿಂದ ಡಯಟ್‌ನ ಅಧಿಕಾರಿಗಳನ್ನು ತಾಲ್ಲೂಕಿಗೆ ಒಬ್ಬರಂತೆ ನೋಡೆಲ್ ಅಧಿಕಾರಿಗಳನ್ನು ಉಪನಿರ್ದೇಶಕರು(ಅಭಿವೃದ್ಧಿ) ರವರೇ ನೇಮಿಸುವುದು.<br>➢ ಉಪನಿರ್ದೇಶಕರು(ಆಡಳಿತ) ರವರ ಕಛೇರಿಯಲ್ಲಿ ಪರೀಕ್ಷೆಯ OMRಗಳ ಸ್ಕ್ಯಾನಿಂಗ್ ಕಾರ್ಯವು ನಡೆಯುವುದರಿಂದ ಶಿಕ್ಷಣಾಧಿಕಾರಿಗಳೊಬ್ಬರನ್ನು ಮೌಲ್ಯಮಾಪನದ ನೋಡೆಲ್ ಅಧಿಕಾರಿಯನ್ನಾಗಿ ನೇಮಿಸುವುದು. | 27/01/2018 | ಉಪನಿರ್ದೇಶಕರು(ಅಭಿವೃದ್ಧಿ) ಮತ್ತು ಉಪನಿರ್ದೇಶಕರು(ಆಡಳಿತ) |

| ರಾಜ್ಯ ಹಂತದ ಸಭೆ ಮತ್ತು ತರಬೇತಿ | | | | |
|---|---|---|---|---|
| ಕ್ರಮ ಸಂಖ್ಯೆ | ನಿರ್ವಹಿಸಬೇಕಾದ ಕಾರ್ಯ | ಸೂಚನೆಗಳು | ಕಾಲಮಿತಿ | ಜವಾಬ್ದಾರಿ |
| 10 | ಜಿಲ್ಲಾ ನೋಡೆಲ್ ಅಧಿಕಾರಿಗಳು ಮತ್ತು ಮುಖ್ಯೋಪಾಧ್ಯಾಯರ ಸಭೆ | ➢ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಬೆಂಗಳೂರು ಗ್ರಾಮಾಂತರ ಇಲ್ಲಿ ಸಭೆಯನ್ನು ನಡೆಸಲಾಗುವುದು.<br>➢ 74 ಆದರ್ಶ ವಿದ್ಯಾಲಯಗಳ ಮುಖ್ಯೋಪಾಧ್ಯಾಯರು, 22 ಡಯಟ್ ನೋಡೆಲ್ ಅಧಿಕಾರಿಗಳು ಮತ್ತು 22 ಡಿ.ಡಿ.ಪಿ.ಐ ಕಛೇರಿಯ ನೋಡೆಲ್ ಅಧಿಕಾರಿಗಳಿಗೆ ಸಭೆ.<br>➢ ಸಭೆಯಲ್ಲಿ ಪರೀಕ್ಷಾ ಕಾರ್ಯದ ಬಗ್ಗೆ ವಿವರಣೆ ಮತ್ತು ಚರ್ಚೆ.<br>➢ ವಿವಿಧ ಅಧಿಕಾರಿಗಳ ಕರ್ತವ್ಯಗಳ ಬಗ್ಗೆ ಮಾರ್ಗದರ್ಶನ.<br>➢ ವಿದ್ಯಾವಾಹಿನಿ ತಂತ್ರಾಂಶ ಬಳಸುವ ಬಗ್ಗೆ ತರಬೇತಿ. | ದಿನಾಂಕ 30/01/2018 ರಂದು ಬೆಳಗ್ಗೆ 10.00 ಗಂಟೆಯಿಂದ ಸಂಜೆ 5.30 ರವರೆಗೆ | ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಎಸ್.ಎಸ್.ಎ ಮತ್ತು ಆರ್.ಎಮ್.ಎಸ್.ಎ, ಬೆಂಗಳೂರು ರವರ ಅಧ್ಯಕ್ಷತೆ. ನಿರ್ದೇಶಕರು(ಕಾರ್ಯಕ್ರಮ), ನಿರ್ದೇಶಕರು(ಗುಣಮಟ್ಟ), ನಿರ್ದೇಶಕರು(ಕೆ.ಎಸ್.ಈ.ಈ.ಬಿ), ಆರ್.ಎಮ್.ಎಸ್.ಎ ಕಛೇರಿಯ ಅಧಿಕಾರಿಗಳು ಮತ್ತು ಸಿಬ್ಬಂದಿ. |

| ಜಿಲ್ಲಾ ಹಂತದ ಕಾರ್ಯಗಳು | | | | |
|---|---|---|---|---|
| ಕ್ರಮ ಸಂಖ್ಯೆ | ನಿರ್ವಹಿಸಬೇಕಾದ ಕಾರ್ಯ | ಸೂಚನೆಗಳು | ಕಾಲಮಿತಿ | ಜವಾಬ್ದಾರಿ |
| 11 | ಪರೀಕ್ಷಾ ಕೇಂದ್ರದ ಮಾಹಿತಿ | ➢ ಕ್ಷೇತ್ರ ಶಿಕ್ಷಣಾಧಿಕಾರಿಗಳು ವಿದ್ಯಾವಾಹಿನಿಯಲ್ಲಿ ತಾಲ್ಲೂಕಿನ ಪರೀಕ್ಷಾ ಕೇಂದ್ರಗಳ ಮಾಹಿತಿಯನ್ನು ನಿಗದಿಪಡಿಸಿರುವ ನಮೂನೆಯಲ್ಲಿ online ಮೂಲಕವೇ ಸಲ್ಲಿಸುವುದು.<br>➢ ಜಿಲ್ಲೆಗಳಿಂದ ಸಭೆಗೆ ಆಗಮಿಸುವ ಎಲ್ಲಾ ಡಯಟ್ ನೋಡೆಲ್ ಅಧಿಕಾರಿಗಳು ಪರೀಕ್ಷಾ ಕಾರ್ಯಕ್ಕೆ ಸಂಬಂಧಿಸಿದಂತೆ ಸಲ್ಲಿಸಬೇಕಾಗಿರುವ ಸಿಬ್ಬಂದಿ/ಅಧಿಕಾರಿಯ ಹೆಸರು, ಹುದ್ದೆ, ವಿಳಾಸ, ದೂರವಾಣಿ ಸಂಖ್ಯೆ ಮುಂತಾದ ಮಾಹಿತಿಯನ್ನು hard ಮತ್ತು soft ಪ್ರತಿಗಳನ್ನು ಸಭೆಯಲ್ಲಿಯೇ ಸಲ್ಲಿಸುವುದು. | ದಿನಾಂಕ 30/01/2018 ರಂದು ನಡೆಯುವ ಸಭೆಯಲ್ಲಿ ಸಲ್ಲಿಸುವುದು | ಆರ್.ಎಮ್.ಎಸ್.ಎ ಅಧಿಕಾರಿಗಳು, ಕೆ.ಎಸ್.ಕ್ಯೂ.ಎ.ಎ.ಸಿ ಅಧಿಕಾರಿಗಳು, ತಾಂತ್ರಿಕ ಪ್ರೋಗ್ರಾಮರ್, ಉಪನಿರ್ದೇಶಕರು(ಅಭಿವೃದ್ಧಿ) ಮತ್ತು ಉಪನಿರ್ದೇಶಕರು(ಆಡಳಿತ) ರವರ ಕಛೇರಿಯ ಪ್ರವೇಶ ಪರೀಕ್ಷೆಯ ನೋಡೆಲ್ ಅಧಿಕಾರಿಗಳು |
| 12 | ಜಿಲ್ಲಾ ಹಂತದ ಪೂರ್ವಭಾವಿ ಸಭೆ | ➢ ಆಯಾ ಬ್ಲಾಕಿನಲ್ಲಿ ಪ್ರವೇಶ ಪರೀಕ್ಷಾ ಕಾರ್ಯದ ಉಸ್ತುವಾರಿಯನ್ನು ಆಯಾ ಬಿ.ಇ.ಓ. ಮತ್ತು ಈ ಕಾರ್ಯಕ್ಕೆ ನೇಮಕವಾದ ಡಯಟ್‌ನ ತಾಲ್ಲೂಕು ನೋಡಲ್ ಅಧಿಕಾರಿಗಳದ್ದಾಗಿದೆ.<br>➢ ಆರ್.ಎಮ್.ಎಸ್.ಎ ರಾಜ್ಯ ಕಛೇರಿ ಸಭೆಯ ನಂತರ ಜಿಲ್ಲಾ ಹಂತದಲ್ಲಿ ಪರೀಕ್ಷಾ ಕಾರ್ಯದಲ್ಲಿ ಭಾಗವಹಿಸುವ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಸಭೆಗಳನ್ನು ಆಯೋಜಿಸಿ ನಡೆಸುವುದು.<br>➢ ಅರ್ಜಿ ಸಲ್ಲಿಕೆ ಹಾಗೂ ಪರೀಕ್ಷಾ ಪ್ರಕ್ರಿಯೆಯ ಬಗ್ಗೆ ಮಾರ್ಗದರ್ಶನ ಮಾಡುವುದು. | ದಿನಾಂಕ 03/02/2018 | ಉಪನಿರ್ದೇಶಕರು(ಅಭಿವೃದ್ಧಿ), ಉಪನಿರ್ದೇಶಕರು(ಆಡಳಿತ) ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು |

| ನಾಮಯಾದಿ ಪಟ್ಟಿ ಮತ್ತು ಪ್ರವೇಶ ಪತ್ರ | | | | |
|---|---|---|---|---|
| ಕ್ರಮ ಸಂಖ್ಯೆ | ನಿರ್ವಹಿಸಬೇಕಾದ ಕಾರ್ಯ | ಸೂಚನೆಗಳು | ಕಾಲಮಿತಿ | ಜವಾಬ್ದಾರಿ |
| 13 | ನಾಮಯಾದಿ ಪಟ್ಟಿ ಸಿದ್ಧಪಡಿಸುವುದು | ➢ ದಿನಾಂಕ 18/02/2018 ರಂದು ತಾಲ್ಲೂಕುಗಳಿಂದ ನೀಡಲಾಗಿರುವ ಪರೀಕ್ಷಾ ಕೇಂದ್ರಗಳ ವಿವರಗಳನ್ನು ತಂತ್ರಾಂಶದಲ್ಲಿ ಅಳವಡಿಸಿ ಪರೀಕ್ಷಾ ಕೇಂದ್ರವಾರು ನಾಮಯಾದಿ ಪಟ್ಟಿಯನ್ನು ಸಿದ್ಧಪಡಿಸುವುದು. | ದಿನಾಂಕ 19/02/2018 ಮತ್ತು 20/02/2018 | ಆರ್.ಎಮ್.ಎಸ್.ಎ ಅಧಿಕಾರಿಗಳು, ಕೆ.ಎಸ್.ಕ್ಯೂ.ಎ.ಎ.ಸಿ ಅಧಿಕಾರಿಗಳು ಮತ್ತು ತಾಂತ್ರಿಕ ಪ್ರೋಗ್ರಾಮರ್ |
| 14 | ಪ್ರವೇಶ ಪತ್ರ | ➢ ನಾಮಯಾದಿ ಪಟ್ಟಿ ಸಿದ್ಧಪಡಿಸಿದ ನಂತರ ಪೋಷಕರ ದೂರವಾಣಿಗೆ ಮತ್ತೊಮ್ಮೆ ಪ್ರವೇಶ ಪತ್ರವನ್ನು online ಮೂಲಕ ಪಡೆಯುವ ಬಗ್ಗೆ ಸಂದೇಶ ರವಾನಿಸಲಾಗುವುದು. ಅಥವಾ ಈ ಹಿಂದೆ ಪಡೆದಿರುವ ಸ್ವೀಕೃತಿಯಲ್ಲಿನ ಸೂಚನೆಯನ್ವಯ ಪ್ರವೇಶ ಪತ್ರವನ್ನು ಪೋಷಕರು ಪಡೆಯಬೇಕಾಗುತ್ತದೆ.<br>➢ ಅಭ್ಯರ್ಥಿಗಳು ಪಡೆದಿರುವ ಪ್ರವೇಶ ಪತ್ರವನ್ನು ಆದರ್ಶ ವಿದ್ಯಾಲಯಗಳ ಮುಖ್ಯೋಪಾಧ್ಯಾಯರು ಸಹಿ ಮಾಡುವುದರೊಂದಿಗೆ ದೃಢೀಕರಿಸಬೇಕು.<br>➢ ಈ ಪ್ರವೇಶ ಪತ್ರವನ್ನು ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಯು ತರುವುದು ಕಡ್ಡಾಯ.<br>➢ ಶಿಕ್ಷಣ ಇಲಾಖೆಯ ಎಲ್ಲಾ ಸ್ಥರದ ಕಛೇರಿಗಳಲ್ಲಿ ಹಾಗೂ ಸೇವಾ ಕೇಂದ್ರಗಳಲ್ಲಿ ಪೋಷಕರಿಗ ತಮ್ಮ ಮಕ್ಕಳ ಪ್ರವೇಶ ಪತ್ರವನ್ನು ಉಚಿತವಾಗಿ ಮುದ್ರಿಸಿ ಕೊಡುವುದು. | 21/02/2018 ರಿಂದ 10/03/2018 ರಂದು ಸಂಜೆ 5.30ರವರೆಗೆ | ಪೋಷಕರು ಸ್ವತಃ ಪಡೆಯಬಹುದು ಅಥವಾ ವಿಭಾಗೀಯ ಆಯುಕ್ತಾಲಯದ ಅಧಿಕಾರಿಗಳು, DDPI(Admin), DDPI(Academic), DyPC(SSA), DyPC(RMSA), BEO, BRCO, BRP, ECO, CRP, ಆದರ್ಶ ವಿದ್ಯಾಲಯಗಳ ಮುಖ್ಯೋಪಾಧ್ಯಾಯರು, ಇತರೆ ಪ್ರೌಢ ಶಾಲೆಗಳ ಮುಖ್ಯೋಪಾಧ್ಯಾಯರು, ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು ಮತ್ತು ಹಿರಿಯ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು |

| ಪರೀಕ್ಷಾ ಸಿಬ್ಬಂದಿಯ ನೇಮಕ | | | | |
|---|---|---|---|---|
| ಕ್ರಮ ಸಂಖ್ಯೆ | ನಿರ್ವಹಿಸಬೇಕಾದ ಕಾರ್ಯ | ಸೂಚನೆಗಳು | ಕಾಲಮಿತಿ | ಜವಾಬ್ದಾರಿ |
| 15 | ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರ ನೇಮಕ | ಕ್ಷೇತ್ರ ಶಿಕ್ಷಣಾಧಿಕಾರಿಗಳು ನಿಯಮಾನುಸಾರ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರ ಪಟ್ಟಿಯನ್ನು ಸಿದ್ಧಪಡಿಸಿ ಉಪನಿರ್ದೇಶಕರು(ಅಭಿವೃದ್ಧಿ) ರವರಿಂದ ಅನುಮೋದನೆ ಪಡೆದು ನಂತರ ಅಧೀಕ್ಷಕರಿಗೆ ಆದೇಶವನ್ನು ನೀಡುವುದು. 50% ರಷ್ಟು ಮಹಿಳಾ ಅಧಿಕಾರಿಗಳಿಗೆ ಕಡ್ಡಾಯವಾಗಿ ಆದ್ಯತೆಯನ್ನು ನೀಡುವುದು. | 01/03/2018 | ಕ್ಷೇತ್ರ ಶಿಕ್ಷಣಾಧಿಕಾರಿಗಳು |
| 16 | ಪರೀಕ್ಷಾ ಸಿಬ್ಬಂದಿಯ ನೇಮಕ | ➢ ಒಂದು ಕೊಠಡಿಗೆ 24 ಮಕ್ಕಳನ್ನು ಮಾತ್ರ ಸೀಮಿತಗೊಳಿಸುವುದು ಅತ್ಯಗತ್ಯ.<br>➢ ಕನಿಷ್ಠ 200 ಮಕ್ಕಳು ಮತ್ತು ಗರಿಷ್ಠ 350 ಮಕ್ಕಳಿಗೆ ಒಂದು ಪರೀಕ್ಷಾ ಕೇಂದ್ರವನ್ನು ಸ್ಥಾಪಿಸುವುದು.<br>➢ ಪರೀಕ್ಷೆಯನ್ನು ತೆಗೆದುಕೊಂಡಿರುವ ಮಕ್ಕಳ ಪೋಷಕರು ಶಿಕ್ಷಕರಾಗಿದ್ದಲ್ಲಿ ಅವರನ್ನು ಪರೀಕ್ಷೆಯ ಯಾವುದೇ ಕಾರ್ಯಕ್ಕೆ ನೇಮಿಸುವಂತಿಲ್ಲ.<br>➢ ಅಗತ್ಯ ಸಂಖ್ಯೆಯಲ್ಲಿ ಕೊಠಡಿ ಮೇಲ್ವಿಚಾರಕರು ಹಾಗೂ ಸಹಾಯಕ ಸಿಬ್ಬಂದಿಯನ್ನು ನೇಮಿಸುವುದು.<br>➢ ಕನಿಷ್ಠ 50% ರಷ್ಟು ಮಹಿಳಾ ಸಿಬ್ಬಂದಿಗೆ ಕಡ್ಡಾಯವಾಗಿ ಆದ್ಯತೆಯನ್ನು ನೀಡಬೇಕು.<br>➢ ವಿಷಯ ಶಿಕ್ಷಕರನ್ನು ಯಾವುದೇ ಕಾರಣಕ್ಕೂ ನೇಮಿಸಬಾರದು. ದೈಹಿಕ ಶಿಕ್ಷಣ ಮತ್ತು ವೃತ್ತಿ ಶಿಕ್ಷಣ, ಸಂಗೀತ ಮುಂತಾದ ಶಿಕ್ಷಕರನ್ನು ಮಾತ್ರ ನೇಮಿಸುವುದು.<br>➢ ಅಗತ್ಯ ಪ್ರಮಾಣದಲ್ಲಿ ಶಿಕ್ಷಕರು ದೊರೆಯದಿದ್ದಲ್ಲಿ ರಾಜ್ಯ ಕಛೇರಿಗೆ ಸಕಾರಣಗಳನ್ನು ಲಿಖಿತವಾಗಿ ದಿನಾಂಕ 06/03/2018 ರಂದು ಸಲ್ಲಿಸಿ ನಂತರ ಅನುಮತಿಯನ್ನು ಪಡೆದು ಬೇರೆ ತಾಲ್ಲೂಕಿನ ಶಿಕ್ಷಕರನ್ನು ನೇಮಿಸುವುದು. | 05/03/2018 | ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಮುಖ್ಯ ಅಧೀಕ್ಷಕರು |
| 17 | ಜಿಲ್ಲಾ ಹಂತದ | ➢ ಪ್ರತಿ 100 ಮಕ್ಕಳಿಗೆ ಒಬ್ಬರು ಪ್ರೌಢ ಶಾಲಾ ಮುಖ್ಯೋಪಾಧ್ಯಾಯರ ಅಥವಾ ತತ್ಸಮಾನ ವೃಂದದ ಅಧಿಕಾರಿಗಳನ್ನು ಮಾತ್ರ ಜಾಗೃತದಳದ | 05/03/2018 | ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು |

| | | | | |
|---|---|---|---|---|
| | ಜಾಗೃತ ದಳದ ರಚನೆ | ಕಾರ್ಯಕ್ಕೆ ನೇಮಿಸುವುದು.<br>➢ ಆಯಾ ತಾಲ್ಲೂಕಿನ ಅಧಿಕಾರಿಗಳನ್ನು ಅದೇ ತಾಲ್ಲೂಕಿನ ಜಾಗೃತದಳದ ಅಧಿಕಾರಿಯನ್ನಾಗಿ ನೇಮಿಸಬಾರದು. ತಾಲ್ಲೂಕನ್ನು ಬದಲಿಸಬೇಕು.<br>➢ ಪ್ರತಿ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕನಿಷ್ಠ 20 ಅಧಿಕಾರಿಗಳ ಪಟ್ಟಿಯನ್ನು ಉಪನಿರ್ದೇಶಕರು(ಅಭಿವೃದ್ಧಿ) ರವರಿಗೆ 05/03/2018 ರಂದು ಸಲ್ಲಿಸುವುದು.<br>➢ ಈ ಪಟ್ಟಿಯಲ್ಲಿ ಅಗತ್ಯ ಸಂಖ್ಯೆಯಲ್ಲಿ ಜಾಗೃತದಳದ ಅಧಿಕಾರಿಗಳನ್ನು ನೇಮಕಾತಿ ಮಾಡುವುದು.<br>➢ ಕನಿಷ್ಠ 50% ರಷ್ಟು ಮಹಿಳಾ ಅಧಿಕಾರಿಗಳಿಗೆ ಕಡ್ಡಾಯವಾಗಿ ಆದ್ಯತೆಯನ್ನು ನೀಡಬೇಕು. | | ಉಪನಿರ್ದೇಶಕರು(ಅಭಿವೃದ್ಧಿ) |
| 18 | ರಾಜ್ಯ ಹಂತದ ನೋಡೆಲ್ ಅಧಿಕಾರಿಗಳ ನೇಮಕ | ರಾಜ್ಯದ ಹಂತದಲ್ಲಿ ಗ್ರೂಪ್–ಬಿ ಮತ್ತು ಗ್ರೂಪ್–ಎ ಸ್ಥರದ ಅಧಿಕಾರಿಗಳನ್ನು ಜಿಲ್ಲಾ ನೋಡೆಲ್ ಅಧಿಕಾರಿಗಳನ್ನಾಗಿ ನೇಮಿಸಲಾಗುವುದು. ಪರೀಕ್ಷಾ ದಿನದಂದು ಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು. | 05/03/2018 | ಆರ್.ಎಮ್.ಎಸ್.ಎ ರಾಜ್ಯ ಕಛೇರಿ |

**ತಾಲ್ಲೂಕು ಹಂತದ ಪೂರ್ವಸಿದ್ಧತಾ ಸಭೆ**

| ಕ್ರಮ ಸಂಖ್ಯೆ | ನಿರ್ವಹಿಸಬೇಕಾದ ಕಾರ್ಯ | ಸೂಚನೆಗಳು | ಕಾಲಮಿತಿ | ಜವಾಬ್ದಾರಿ |
|---|---|---|---|---|
| 19 | ತಾಲ್ಲೂಕು ಹಂತದ ಸಭೆ | ಪರೀಕ್ಷಾ ಕಾರ್ಯಕ್ಕೆ ನಿಯೋಜಿತರಾದ ಎಲ್ಲಾ ಸ್ಥರದ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗೆ ಅಗತ್ಯ ಮಾರ್ಗದರ್ಶನವನ್ನು ಮಾಡುವುದು. | 09/03/2018 | ಡಯಟ್ ಅಧಿಕಾರಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಪರೀಕ್ಷಾ ಕಾರ್ಯಕ್ಕೆ ನಿಯೋಜಿಸಲಾದ ಅಧಿಕಾರಿಗಳು ಮತ್ತು ಸಿಬ್ಬಂದಿ |

**ಪ್ರಶ್ನೆ ಪತ್ರಿಕೆ ಮತ್ತು OMR**

| ಕ್ರಮ ಸಂಖ್ಯೆ | ನಿರ್ವಹಿಸಬೇಕಾದ ಕಾರ್ಯ | ಸೂಚನೆಗಳು | ಕಾಲಮಿತಿ | ಜವಾಬ್ದಾರಿ |
|---|---|---|---|---|
| 20 | ಪ್ರಶ್ನೆ ಪತ್ರಿಕೆ ಮತ್ತು OMR ಗಳ ರವಾನೆ | ➢ ಕೆ.ಎಸ್.ಕ್ಯೂ.ಎ.ಎ.ಸಿ ವತಿಯಿಂದ ಜಿಲ್ಲೆಗಳ ಡಯಟ್‌ಗೆ ರವಾನೆಯಾಗುತ್ತದೆ. ಇದನ್ನು ಡಯಟ್ ಪ್ರಾಂಶುಪಾಲರು ಅಥವಾ ಡಯಟ್ ನೋಡೆಲ್ ಅಧಿಕಾರಿಗಳು ಸ್ವೀಕರಿಸುವುದು. ಸಾಧ್ಯವಾದಲ್ಲಿ ಅಂದೇ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ವಿತರಿಸುವುದು.<br>➢ ಕೆ.ಎಸ್.ಕ್ಯೂ.ಎ.ಎ.ಸಿ ವತಿಯಿಂದ ಇದರ ಬಗ್ಗೆ ಸುತ್ತೋಲೆಯನ್ನು ದಿನಾಂಕ 01/03/2018 ರೊಳಗಾಗಿ ನೀಡಲಾಗುವುದು. | 08/03/2018 ಮತ್ತು 09/03/2018 | ಕೆ.ಎಸ್.ಕ್ಯೂ.ಎ.ಎ.ಸಿ ಅಧಿಕಾರಿಗಳು ಮತ್ತು ಡಯಟ್ ಅಧಿಕಾರಿಗಳು |
| 21 | ಪ್ರಶ್ನೆ ಪತ್ರಿಕೆ ಮತ್ತು OMR ಗಳ ರಕ್ಷಣಾ ಕಾರ್ಯ | ಕ್ಷೇತ್ರ ಶಿಕ್ಷಣಾಧಿಕಾರಿಗಳು ಖುದ್ದಾಗಿ ಡಯಟ್‌ಗಳಿಗೆ ಆಗಮಿಸಿ ಗೌಪ್ಯ ಸಾಮಗ್ರಿಗಳನ್ನು ಪಡೆದು ಪರಿಶೀಲಿಸಿ ತಮ್ಮ ತಾಲ್ಲೂಕುಗಳ ಖಜಾನೆಗಳಲ್ಲಿ ಸುರಕ್ಷಿತವಾಗಿ ಶೇಖರಿಸಿಡುವುದು. | 08/03/2018 ಮತ್ತು 09/03/2018 | ಡಯಟ್ ಅಧಿಕಾರಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ತಾಲ್ಲೂಕು ಖಜಾನಾಧಿಕಾರಿಗಳು |

**ಪರೀಕ್ಷೆ**

| ಕ್ರಮ ಸಂಖ್ಯೆ | ನಿರ್ವಹಿಸಬೇಕಾದ ಕಾರ್ಯ | ಸೂಚನೆಗಳು | ಕಾಲಮಿತಿ | ಜವಾಬ್ದಾರಿ |
|---|---|---|---|---|
| 22 | ಪರೀಕ್ಷೆಯ ವೇಳಾಪಟ್ಟಿ | ➢ ದಿನಾಂಕ 11/03/2018 ರಂದು ಬೆಳಿಗ್ಗೆ 10.30 ರಿಂದ 1.00 ರವರೆಗೆ ಪರೀಕ್ಷೆಯನ್ನು ನಡೆಸುವುದು.<br>➢ ಪರೀಕ್ಷಾ ದಿನದಂದು ಎಲ್ಲಾ ಹಂತದ ಇಲಾಖಾ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಪರೀಕ್ಷಾ ಕೇಂದ್ರಗಳಿಗೆ ಕಡ್ಡಾಯವಾಗಿ ಭೇಟಿ ನೀಡಿ ಪರಿಶೀಲನೆ ಮಾಡುವುದು. | 11/03/2018 | ವಿಭಾಗೀಯ ಆಯುಕ್ತಾಲಯದ ಅಧಿಕಾರಿಗಳು, DDPI(Admin), DDPI(Academic), DyPC(SSA), DyPC(RMSA), BEO, BRCO, BRP, ECO, CRP, ಆದರ್ಶ ವಿದ್ಯಾಲಯಗಳ ಮುಖ್ಯೋಪಾಧ್ಯಾಯರು, ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರು ಮತ್ತು ಹಿರಿಯ ಪ್ರಾಥಮಿಕ ಶಾಲಾ |

| | | | | |
|---|---|---|---|---|
| | | | | ಮುಖ್ಯೋಪಾಧ್ಯಾಯರು |
| | ಪ್ರಶ್ನೆ ಪತ್ರಿಕೆಗಳನ್ನು ಖಜಾನೆಯಿಂದ ಪರೀಕ್ಷಾ ಕೇಂದ್ರಗಳಿಗೆ ರವಾನಿಸುವುದು | ಪರೀಕ್ಷಾ ದಿನದಂದು ಬೆಳಿಗ್ಗೆ 9.00ಕ್ಕೆ ಖಜಾನೆಯಿಂದ ಪ್ರಶ್ನೆ ಪತ್ರಿಕೆ ಮತ್ತು OMR ಬಂಡಲ್‌ನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಪಡೆದು ಅವುಗಳನ್ನು ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಗೆ ಹಸ್ತಾಂತರಿಸುವುದು. | 11/03/2018 | ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಮುಖ್ಯ ಅಧೀಕ್ಷಕರು |
| 23 | ಪ್ರಶ್ನೆ ಪತ್ರಿಕೆಗಳನ್ನು ಹಾಗೂ OMR ಬಂಡಲ್‌ನ್ನು ತೆರೆಯುವುದು. | ➢ ಬೆಳಿಗ್ಗೆ 10.00–10.10 ರೊಳಗೆ OMR ಬಂಡಲ್‌ನ್ನು ಜಾಗೃತದಳದ ಅಧಿಕಾರಿಗಳ ಸಮ್ಮುಖದಲ್ಲಿ ತೆರೆಯಬೇಕು. ನಾಮಯಾದಿ ಪಟ್ಟಿಗೆ ಅನುಗುಣವಾಗಿ ಇರುವುದನ್ನು ಖಾತ್ರಿಪಡಿಸಿಕೊಳ್ಳಬೇಕು. ನಂತರ ಅವುಗಳನ್ನು ಸುರಕ್ಷಿತವಾದ ಅಲಮಾರದಲ್ಲಿ ಶೇಖರಿಸಿಡಬೇಕು.<br>➢ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ನಾಮಿನಲ್ ರೋಲ್‌ಗಳನ್ನು ಮುಖ್ಯ ಅಧೀಕ್ಷಕರು ಪಡೆದು ಕೊಠಡಿ ಮೇಲ್ವಿಚಾರಕರಿಗೆ ನೀಡಲಾಗುವುದು. ಇದನ್ನು ಅಭ್ಯರ್ಥಿಗಳ ಪರಿಶೀಲನೆಗೆ ಬಳಸುವುದು ಹಾಗೂ ವಿದ್ಯಾರ್ಥಿಗಳ ಸಹಿಯನ್ನು ಮಾಡಿಸುವುದು.<br>➢ ಕೊಠಡಿ ಮೇಲ್ವಿಚಾರಕರಿಗೆ OMR ಬಂಡಲ್‌ನ್ನು ಹಾಗೂ ಅಗತ್ಯ ಸಾಮಗ್ರಿಗಳನ್ನು ಬೆಳಿಗ್ಗೆ 10.15ಕ್ಕೆ ಮುಖ್ಯ ಅಧೀಕ್ಷಕರಿಂದ ಪಡೆದು ನಿಯೋಜಿಸಿರುವ ಕೊಠಡಿಗಳಿಗೆ ಕೂಡಲೇ ತೆರಳುವುದು. ಮಕ್ಕಳಿಗೆ OMR ಗಳನ್ನು ವಿತರಿಸಿ ಅಗತ್ಯ ಸೂಚನೆಗಳನ್ನು ನೀಡಿ ಕಾರ್ಯವನ್ನು ಪೂರ್ಣಗೊಳಿಸುವುದು.<br>➢ ಬೆಳಿಗ್ಗೆ 10.20ಕ್ಕೆ ಸರಿಯಾಗಿ ಜಾಗೃತದಳದ ಅಧಿಕಾರಿಗಳ ಸಮ್ಮುಖದಲ್ಲಿ ಪ್ರಶ್ನೆ ಪತ್ರಿಕೆಯ ಬಂಡಲ್‌ನ್ನು ತೆರೆದು ದೃಢೀಕರಿಸಬೇಕು.<br>➢ ಪ್ರಶ್ನೆ ಪತ್ರಿಕೆಯ ಕೊಠಡಿವಾರು ಲಕೋಟೆಗಳನ್ನು ಆಯಾ ಕೊಠಡಿಗಳಿಗೆ ಪರೀಕ್ಷೆ ಪ್ರಾರಂಭವಾಗುವ ಐದು ನಿಮಿಷಗಳ ಪೂರ್ವದಲ್ಲಿ ವಿತರಿಸಿ ಕೊಠಡಿ ಮೇಲ್ವಿಚಾರಕರ ಸಹಿಯನ್ನು ಪಡೆಯಬೇಕು.<br>➢ ಸರಿಯಾಗಿ 10.30 ಗಂಟೆಗೆ ಪ್ರಶ್ನೆ ಪತ್ರಿಕೆಯ ಲಕೋಟೆಯನ್ನು ಇಬ್ಬರು | 11/03/2018 | ತಾಲ್ಲೂಕಿನ ಡಯಟ್ ನೋಡೆಲ್ ಅಧಿಕಾರಿ, ಮುಖ್ಯ ಅಧೀಕ್ಷಕರು, ಜಾಗೃತ ದಳದ ಅಧಿಕಾರಿಗಳು, ಕೊಠಡಿ ಮೇಲ್ವಿಚಾರಕರು |

| | | | | |
|---|---|---|---|---|
| | | ಮಕ್ಕಳಿಂದ ಮತ್ತು ಕೊಠಡಿ ಮೇಲ್ವಿಚಾರಕರು ಸಹಿ ಮಾಡಿ ತೆರದು ಪರೀಕ್ಷೆಯನ್ನು ಪ್ರಾರಂಭಿಸುವುದು.<br>➢ ನಾಮಿನಲ್ ರೋಲ್‌ನ ಪ್ರತಿ ಪುಟವು 24 ವಿದ್ಯಾರ್ಥಿಗಳ ವಿವರಗಳನ್ನೊಳಗೊಂಡಿರುತ್ತದೆ. ಪ್ರತಿ ಅಭ್ಯರ್ಥಿಯ ಪೋಟೋ ಹಾಗೂ ಮೀಸಲಾತಿ ವರ್ಗದ ವಿವರಗಳನ್ನು ಪರಿಶೀಲಿಸಿ ಸಹಿ ಪಡೆಯುವುದು.<br>➢ ಗೈರುಹಾಜರಾದ ಅಭ್ಯರ್ಥಿಗಳ ವಿವರವನ್ನು ನಿಗಧಿತ ನಮೂನೆಯಲ್ಲಿ ಸಿದ್ಧಪಡಿಸುವುದು.<br>➢ ಎಸ್.ಎಸ್.ಎಲ್.ಸಿ ಪರೀಕ್ಷಾ ನಿಯಮಗಳನ್ನು ಅನುಸರಿಸಿ ಮುಂದಿನ ಕಾರ್ಯಗಳನ್ನು ಕೈಗೊಳ್ಳುವುದು. | | |
| 23 | ಉತ್ತರಿಸಿರುವ OMR | ➢ OMR ಬಂಡಲ್ ಮಾಡಲು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಅನುಸರಿಸುವ ವಿಧಾನ ಅನುಸರಿಸುವುದು. 24 OMRಗಳಿಗೆ ಒಂದು ಪ್ಯಾಕೇಟ್ ಮಾಡುವುದು.<br>➢ ಪರೀಕ್ಷೆ ಮುಗಿದ ಮೇಲೆ OMRಗಳ ಜೊತೆಯಲ್ಲಿ ನಾಮಿನಲ್ ರೋಲ್ ಮತ್ತು ಗೈರುಹಾಜರಿ ತಃಖ್ತೆಗಳನ್ನು ಆಯಾ ಜಿಲ್ಲೆಯ ಉಪನಿರ್ದೇಶಕರು (ಆಡಳಿತ) ರವರು ಸ್ವೀಕರಿಸಿ ಸುರಕ್ಷಿತವಾಗಿ ಸಂರಕ್ಷಿಸುವುದು.<br>➢ ಪರೀಕ್ಷೆಯು ನಡೆದ ದಿನವೇ OMR ಬಂಡಲ್‌ನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಪನಿರ್ದೇಶಕರು(ಆಡಳಿತ) ರವರಿಗೆ ಹಸ್ತಾಂತರಿಸಿ ಸ್ವೀಕೃತಿ ಪಡೆಯುವುದು. | 11/03/2018 | ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಉಪನಿರ್ದೇಶಕರು(ಆಡಳಿತ) |

| ಸ್ಕ್ಯಾನಿಂಗ್ ಮತ್ತು ಫಲಿತಾಂಶ ಸಿದ್ಧಪಡಿಸುವುದು | | | | |
|---|---|---|---|---|
| ಕ್ರಮ ಸಂಖ್ಯೆ | ನಿರ್ವಹಿಸಬೇಕಾದ ಕಾರ್ಯ | ಸೂಚನೆಗಳು | ಕಾಲಮಿತಿ | ಜವಾಬ್ದಾರಿ |
| 24 | ಸ್ಕ್ಯಾನಿಂಗ್ | ➢ ಉತ್ತರಿಸಿರುವ OMRಗಳನ್ನು ಉಪನಿರ್ದೇಶಕರು(ಆಡಳಿತ) ರವರ ಕಛೇರಿಯಲ್ಲಿ ಗೌಪ್ಯವಾಗಿ ಸ್ಕ್ಯಾನ್ ಮಾಡುವುದು.<br>➢ ಸ್ಕ್ಯಾನಿಂಗ್ ಕಾರ್ಯವನ್ನು ನಡೆಸುವ ಕೊಠಡಿಯಲ್ಲಿ ಸಂಪೂರ್ಣವಾಗಿ ಸಿ.ಸಿ ಟಿ.ವಿ ಅಳವಡಿಸುವುದು. | 12/03/2018 ರಿಂದ 16/03/2018 | ಉಪನಿರ್ದೇಶಕರು(ಆಡಳಿತ),<br>ಉಪನಿರ್ದೇಶಕರು(ಅಭಿವೃದ್ದಿ)ಡಯಟ್<br>ನೋಡೆಲ್ ಅಧಿಕಾರಿಗಳು,<br>ಉಪನಿರ್ದೇಶಕರ ಕಛೇರಿಯ ನೋಡೆಲ್ |

| | | | | |
|---|---|---|---|---|
| | | ➢ ಜಿಲ್ಲಾ ಹಂತದಲ್ಲಿ ನಡೆಯುವ **OMR**ಗಳ ಸ್ಕ್ಯಾನಿಂಗ್ ಕಾರ್ಯವನ್ನು ಡಯಟ್ ನೋಡೆಲ್ ಅಧಿಕಾರಿಗಳು ಹಾಗೂ ಉಪನಿರ್ದೇಶಕರು(ಆಡಳಿತ) ರವರ ಕಛೇರಿಯ ನೋಡೆಲ್ ಅಧಿಕಾರಗಳ ಸಮ್ಮುಖದಲ್ಲಿಯೇ ನಡೆಸಬೇಕು. ಸದರಿ ಅಧಿಕಾರಿಗಳು ಪೂರ್ಣ ಪ್ರಮಾಣದಲ್ಲಿ ಉಪಸ್ಥಿತರಿರುವುದು. ಈ ಕಾರ್ಯಕ್ಕೆ ಬದಲಿ ನಿಯೋಜನೆಯನ್ನು ಮಾಡುವಂತಿಲ್ಲ. | | ಅಧಿಕಾರಿಗಳು, ಪ್ರೋಗ್ರಾಮರ್ |
| 25 | ಅಂಕಪಟ್ಟಿ | ➢ ಉಪನಿರ್ದೇಶಕರು(ಆಡಳಿತ) ರವರು ಪರೀಕ್ಷಾ ಕಾರ್ಯದ ದಾಖಲೆಗಳು ಮತ್ತು **OMR**ಗಳನ್ನು ಕೆ.ಎಸ್.ಕ್ಯೂ.ಎ.ಎ.ಸಿಗೆ ಸಲ್ಲಿಸುವುದು | 17/03/2018 | ಉಪನಿರ್ದೇಶಕರು(ಆಡಳಿತ) ಮತ್ತು ಕೆ.ಎಸ್.ಕ್ಯೂ.ಎ.ಎ.ಸಿ ಅಧಿಕಾರಿಗಳು |
| | | ➢ ಸ್ಕ್ಯಾನಿಂಗ್ ಮೂಲಕ ಬಂದಿರುವ ದಾಖಲೆಗಳನ್ನು ಆಧರಿಸಿ ಅಂಕಪಟ್ಟಿಯನ್ನು ಸಿದ್ಧಪಡಿಸಿ ಆರ್.ಎಮ್.ಎಸ್.ಎ ರಾಜ್ಯ ಕಛೇರಿಗೆ ಸಲ್ಲಿಸುವುದು. | 22/03/2018 | ಕೆ.ಎಸ್.ಕ್ಯೂ.ಎ.ಎ.ಸಿ ಅಧಿಕಾರಿಗಳು ಮತ್ತು ಆರ್.ಎಮ್.ಎಸ್.ಎ, ಬೆಂಗಳೂರು |
| 26 | ಫಲಿತಾಂಶ | ➢ ಕೆ.ಎಸ್.ಕ್ಯೂ.ಎ.ಎ.ಸಿ ರವರು ನೀಡಿರುವ ಅಂಕಪಟ್ಟಿಯನ್ನಾಧರಿಸಿ ಕರ್ನಾಟಕ ರೋಸ್ಟರ್ ಅನ್ವಯ ಆಯ್ಕೆ ಪಟ್ಟಿ ಹಾಗೂ ಅರ್ಹತಾ ಪಟ್ಟಿಗಳನ್ನು ಸಿದ್ಧಪಡಿಸುವುದು. | 23/03/2018 ರಿಂದ 25/03/2018 | ಪ್ರೋಗ್ರಾಮರ್, ಎಸ್.ಎಸ್.ಎ, ಬೆಂಗಳೂರು |
| | | ➢ ಫಲಿತಾಂಶವನ್ನು ವಿದ್ಯಾವಾಹಿನಿಯಲ್ಲಿ ಪ್ರಕಟಿಸುವುದು | 26/03/2018 | ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಬೆಂಗಳೂರು |

## ಅನುದಾನ ಬಿಡುಗಡೆ ಮತ್ತು ಬಳಕೆ

ಪರೀಕ್ಷಾ ಕಾರ್ಯ ಹಾಗೂ ಉಸ್ತುವಾರಿ ಕಾರ್ಯಗಳ ಸಂಬಂಧ ಪ್ರತಿ ಪರೀಕ್ಷಾ ಕೇಂದ್ರಕ್ಕೆ ಅನುದಾನವನ್ನು ರಾಜ್ಯ ಕಛೇರಿಯ ವತಿಯಿಂದ ಆದರ್ಶ ಶಾಲೆಯ ಮುಖ್ಯ ಶಿಕ್ಷಕರ ಖಾತೆಗೆ ಬಿಡುಗಡೆ ಮಾಡಲಾಗುವುದು. ಸಕಾಲದಲ್ಲಿ ಅನುದಾನ ಬಿಡುಗಡೆಯಾಗದಿದ್ದಲ್ಲಿ ಆದರ್ಶ ಶಾಲೆಯ ಮುಖ್ಯ ಶಿಕ್ಷಕರು ಶಾಲೆಯ ಖಾತೆಯಲ್ಲಿ ಇರುವ ಅನುದಾನವನ್ನು ಮುಂಗಡವಾಗಿ ಬಳಸಿಕೊಳ್ಳುವಂತೆ ಸೂಚನೆ ನೀಡುವುದು. (ಆದರ್ಶ ವಿದ್ಯಾಲಯದ ಮುಖ್ಯ ಶಿಕ್ಷಕರೇ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಾದಲ್ಲಿ ಅವರೇ ವೆಚ್ಚಗಳನ್ನು ನಿರ್ವಹಿಸುವುದು)

ಬೇರೆಯವರನ್ನು ಮುಖ್ಯ ಅಧೀಕ್ಷಕರನ್ನಾಗಿ ನೇಮಿಸಿದ್ದಲ್ಲಿ, ಅವರಿಗೆ ರಾಜ್ಯ ಕಛೇರಿಯಿಂದ ನಿಗಧಿಪಡಿಸಲಾಗುವ ಅನುದಾನವನ್ನು ಮುಂಗಡವಾಗಿ ನೀಡುವುದು. ಒಂದು ತಾಲ್ಲೂಕಿನಲ್ಲಿ ಒಂದಕ್ಕಿಂತ ಹೆಚ್ಚು ಕೇಂದ್ರಗಳು ಇದ್ದಲ್ಲಿ ಎಲ್ಲಾ ಪರೀಕ್ಷಾ ಕೇಂದ್ರಗಳ ಮುಖ್ಯ ಅಧೀಕ್ಷಕರಿಗೆ ನಿಗಧಿಪಡಿಸಲಾಗುವ ಅನುದಾನವನ್ನು ಬಿಡುಗಡೆ ಮಾಡುವುದು ಹಾಗೂ ಎಲ್ಲಾ ಪರೀಕ್ಷಾ ಕೇಂದ್ರಗಳು, ಬಿ.ಇ.ಒ, ಖಜಾನಾಧಿಕಾರಿಗಳು ಮತ್ತು ಡಯಟ್‌ಗಳಿಂದ ಲೆಕ್ಕಪತ್ರಗಳನ್ನು ಪಡೆದು ಆದರ್ಶ ವಿದ್ಯಾಲಯಗಳಲ್ಲಿ ನಿರ್ವಹಿಸಿ ಲೆಕ್ಕಪರಿಶೋಧನೆಯ ಸಮಯದಲ್ಲಿ ಪರಿಶೀಲನೆಗೆ ಸಲ್ಲಿಸುವುದು.

ಈ ಕೆಳಕಂಡ ಮಾರ್ಗಸೂಚಿಯನ್ನು ಅನುಸರಿಸಿ ಎಲ್ಲಾ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರು ಅನುದಾನವನ್ನು ಖರ್ಚು ಮಾಡಿ ಪರೀಕ್ಷಾ ಕಾರ್ಯ ಮುಗಿದ 07 ದಿನದೊಳಗೆ ಲೆಕ್ಕಪತ್ರ ವಿವರದೊಂದಿಗೆ ಬಳಕೆ ಪ್ರಮಾಣ ಪತ್ರವನ್ನು ಆದರ್ಶ ಶಾಲೆಯ ಮುಖ್ಯ ಶಿಕ್ಷಕರಿಗೆ ನೀಡುವುದು.

1. **ಅನುದಾನ ಬಳಕೆಗೆ ಮಾರ್ಗಸೂಚಿ:** ಪರೀಕ್ಷಾ ಪ್ರಕ್ರಿಯೆಗೆ ಸಂಬಂಧಿಸಿದಂತೆ ಆದರ್ಶ ವಿದ್ಯಾಲಯದ ಮುಖ್ಯ ಶಿಕ್ಷಕರು ಅನುದಾನ ಬಿಡುಗಡೆ/ಬಳಕೆಗೆ ಈ ಕೆಳಗಿನ ಮಾರ್ಗಸೂಚಿಯನ್ನು ಅನುಸರಿಸುವುದು.

| ಕ್ರ.ಸಂ. | ವಿವರ | ಪರೀಕ್ಷಾ ಸಂಭಾವನೆ ರೂ.ಗಳಲ್ಲಿ |
|---|---|---|
| 1 | ಜಿಲ್ಲಾ ನೋಡಲ್ ಅಧಿಕಾರಿಗಳು- ಜಿಲ್ಲೆಗೆ ಒಬ್ಬರು ಮಾತ್ರ (ಪರೀಕ್ಷೆಗಾಗಿ) | 500 |
| 2 | ಉಪನಿರ್ದೇಶಕರು(ಆಡಳಿತ) ರವರ ಕಛೇರಿಯ ನೋಡಲ್ ಅಧಿಕಾರಿಗಳು | 500 |
| 3 | ತಾಲ್ಲೂಕು ನೋಡಲ್ ಅಧಿಕಾರಿಗಳು- ಒಂದು ತಾಲ್ಲೂಕಿಗೆ ಒಬ್ಬರು ಮಾತ್ರ | 500 |
| 4 | ಕ್ಷೇತ್ರ ಶಿಕ್ಷಣಾಧಿಕಾರಿಗಳು | 500 |
| 5 | ಮುಖ್ಯ ಅಧೀಕ್ಷಕರು | 500 |
| 6 | ಕೊಠಡಿ ಮೇಲ್ವಿಚಾರಕರಿಗೆ | 100(24 ಅಭ್ಯರ್ಥಿಗಳಿಗೆ ಒಬ್ಬರಂತೆ) |
| 7 | ಜಿಲ್ಲಾ/ತಾಲ್ಲೂಕು ಖಜಾನಾಧಿಕಾರಿಗಳಿಗೆ | 500 |
| 8 | ಪರೀಕ್ಷಾ ಕೇಂದ್ರದ ಸಹಾಯಕರಿಗೆ | 200 (2 ದಿನಕ್ಕೆ) |
| 9 | ಪರೀಕ್ಷಾ ಕೇಂದ್ರಗಳ 'ಡಿ' ಗ್ರೂಪ್ ನೌಕರರಿಗೆ | 150 (2 ದಿನಕ್ಕೆ) |
| 10 | ವಾಟರ್ ಬಾಯ್ | 75 |
| 11 | ವಾಹನ ಚಾಲಕರಿಗೆ | 200 (2 ದಿನಕ್ಕೆ) |
| 12 | ಸಾದಿಲ್ವಾರು (ಪರೀಕ್ಷಾ ಕಾರ್ಯಕ್ಕೆ) | 150 ಅಭ್ಯರ್ಥಿಗಳು- ರೂ. 600/-<br>250 ಅಭ್ಯರ್ಥಿಗಳು- ರೂ 700/-<br>350 ಅಭ್ಯರ್ಥಿಗಳು- ರೂ 800/-<br>351 ಅಭ್ಯರ್ಥಿಗಳಿಗಿಂತ ಹೆಚ್ಚು ಇದ್ದಲ್ಲಿ ರೂ 900/- |

ಪರೀಕ್ಷಾ ಪ್ರಕ್ರಿಯೆಯ ಯಾವುದೇ ಸಂದರ್ಭದಲ್ಲಿ ಸಮಸ್ಯೆಗಳು ಉದ್ಭವಿಸಿದ್ದಲ್ಲಿ ಮಾಹಿತಿಗಾಗಿ ಆರ್.ಎಮ್.ಎಸ್.ಎ ಕಛೇರಿಯ ಕಾರ್ಯಕ್ರಮಾಧಿಕಾರಿ ಶ್ರೀ ವಿ.ಆರ್.ರವಿಕುಮಾರ್ ರವರನ್ನು 9480695467 ಮೂಲಕ, ಕೆ.ಎಸ್.ಕ್ಯೂ.ಎ.ಎ.ಸಿಯನ್ನು 080-23341615ರ ಮೂಲಕ ಮತ್ತು ತಾಂತ್ರಿಕ ಸಹಾಯಕ್ಕಾಗಿ ಶ್ರೀ ಶ್ರೀನಿವಾಸ ಮುರುಗೋಡ, ಪ್ರೋಗ್ರಾಮರ್, ಎಸ್.ಎಸ್.ಎ, ಬೆಂಗಳೂರು ರವರನ್ನು ದೂರವಾಣಿ ಸಂಖ್ಯೆ 9448999321ರ ಮೂಲಕ ಸಂಪರ್ಕಿಸಿ ಮಾಹಿತಿ ಪಡೆಯಲು ಸೂಚಿಸಿದೆ.

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ
ಮತ್ತು
ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ
ಬೆಂಗಳೂರು

ಗೆ,

1) ಕಾರ್ಯನಿರ್ವಾಹಕ ನಿರ್ದೇಶಕರು, ಕೆ.ಎಸ್.ಕ್ಯೂ.ಎ.ಎ.ಸಿ, ಬೆಂಗಳೂರು.
2) ಸಂಬಂಧಿಸಿದ ಉಪನಿರ್ದೇಶಕರು(ಆಡಳಿತ) ಮತ್ತು ಡಿ.ವೈ.ಪಿ.ಸಿ (ಆರ್.ಎಂ.ಎಸ್.ಎ), ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಅಗತ್ಯ ಕ್ರಮಕ್ಕಾಗಿ.
3) ಸಂಬಂಧಿಸಿದ ಉಪನಿರ್ದೇಶಕರು (ಅಭಿವೃದ್ಧಿ) ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಅಗತ್ಯ ಕ್ರಮಕ್ಕಾಗಿ.
4) ಕ್ಷೇತ್ರ ಶಿಕ್ಷಣಾಧಿಕಾರಿಗಳು, ಆದರ್ಶ ವಿದ್ಯಾಲಯಗಳ ಮುಖ್ಯ ಶಿಕ್ಷಕರು ಮತ್ತು ಸೇವಾ ಕೇಂದ್ರಗಳ ಮುಖ್ಯಸ್ಥರ ಅಗತ್ಯ ಕ್ರಮಕ್ಕಾಗಿ.

**ಪ್ರತಿಯನ್ನು ಗೌರವಪೂರ್ವಕವಾಗಿ**

1. ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಕರ್ನಾಟಕ ಸರ್ಕಾರ ರವರಿಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರಿಗೆ ಸಲ್ಲಿಸಿದೆ.
3. ಅಪರ ಆಯುಕ್ತರು, ಗುಲ್ಬರ್ಗಾ ಮತ್ತು ಧಾರವಾಡ ಆಯುಕ್ತಾಲಯ ರವರಿಗೆ ಅಗತ್ಯ ಕ್ರಮಕ್ಕಾಗಿ.
4. ನಿರ್ದೇಶಕರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರವರಿಗೆ ಅಗತ್ಯ ಕ್ರಮಕ್ಕಾಗಿ.
5. ನಿರ್ದೇಶಕರುಗಳು, ಎಲ್ಲಾ ಅಪರ ಆಯುಕ್ತರ ಕಛೇರಿಗಳು ರವರಿಗೆ ಅಗತ್ಯ ಕ್ರಮಕ್ಕಾಗಿ..
6. ಕಛೇರಿ ಪ್ರತಿ.